ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001.**

ಸಂಖ್ಯೆ:DPI-CPIO-C7(2) (SCRE)03/2023 ಕಂನಂ. 1506971 ದಿನಾಂಕ:02-09-2024

**-: ಅಧಿಸೂಚನೆ :-**

ವಿಷಯ: 2024-25ನೇ ಸಾಲಿಗೆ ಖಾಸಗಿ ಶಾಲೆಗಳಿಗೆ ಹೊಸದಾಗಿ ಶಾಶ್ವತ ಅನುದಾನರಹಿತ ಪೂರ್ವ ಪ್ರಾಥಮಿಕ / ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ನೊಂದಣಿ (Registration) ಹಾಗೂ ಶಾಲಾ ಡೈಸ್ ಕೋಡ್ ಪಡೆಯುವ ಕುರಿತು ಅವಧಿಯನ್ನು ವಿಸ್ತರಿಸಿ ಅವಕಾಶ ಕಲ್ಪಿಸುವ ಕುರಿತು.

ಉಲ್ಲೇಖ:
1. ಕರ್ನಾಟಕ ಶಿಕ್ಷಣ ಕಾಯ್ದೆ- 1983 ಸೆಕ್ಷನ್ 30 ಮತ್ತು 31.
2. ಕರ್ನಾಟಕ ಶಿಕ್ಷಣ ಸಂಸ್ಥೆಗಳು[ವರ್ಗೀಕರಣ ಮತ್ತು ನೊಂದಣಿ] ನಿಯಮಗಳು-1997.
3. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ-2009.
4. Karnataka Educational Institutions [classification, Regulation and Prescription of Curricula etc] [Amendment] Rules-2018.
5. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ:52:ಪಿಜಿಸಿ:2020, ದಿನಾಂಕ: 07.03.2020. ಮತ್ತು ತಿದ್ದುಪಡಿ ದಿನಾಂಕ:11.03.2020.
6. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಪಿ:75 ಪಿಜಿಸಿ 2022, ದಿನಾಂಕ: 25.04.2022.
7. ಸರ್ಕಾರದ ಆದೇಶ ಸಂಖ್ಯೆ:ಇಡಿ 76 ಪಿಜಿಸಿ 2022, ದಿನಾಂಕ:14.10.2022.
8. ಸರ್ಕಾರದ ಪತ್ರದ ಸಂಖ್ಯೆ: ಇಪಿ 41 ಪಿಜಿಸಿ 2023, ದಿನಾಂಕ:31-01-2023.
9. ಮಾನ್ಯ ಆಯುಕ್ತರ ಸುತ್ತೋಲೆ ಸಂಖ್ಯೆ: DPI-CPI0C7(2)(USM)01/2023 ಕಂ.ನಂ. 9866854 ದಿನಾಂಕ: 09.02.2023.
10. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 42 ಪಿಜಿಸಿ 2023 ದಿನಾಂಕ: 28.02.2023.
11. ಈ ಕಚೇರಿ ಜ್ಞಾಪನ ಸಂಖ್ಯೆ:_DPI-CPI0C7-5(OT)/42/2023 E-1105045, ದಿನಾಂಕ:-07-10-2023.
12. The Karnataka Eductional Institution(Appellate Authority) Rules 1998
13. ಈ ಕಚೇರಿ ಅಧಿಸೂಚನೆ ಪತ್ರ ಸಂಖ್ಯೆ:_DPI-CPI0C7-2(SCRE)/03/2023 E-1164327 ದಿನಾಂಕ:-28-12-2023
14. ಈ ಕಚೇರಿ ಅಧಿಸೂಚನೆ ಪತ್ರ ಸಂಖ್ಯೆ:_DPI-CPI0C7-2(SCRE)/03/2023 E-1164327 ದಿನಾಂಕ:-22-02-2024.
15. ಈ ಕಚೇರಿ ಕಡತ ಸಂಖ್ಯೆ:DPI-CPI0C7-2(NWS)/5/2024-1506971ರ ಅನುಮೋದನೆಯಂತೆ

*********

ಕರ್ನಾಟಕ ಶಿಕ್ಷಣ ಕಾಯ್ದೆ-1983ರ ನಿಯಮ 30, 31 ಮತ್ತು 32ರಂತೆ ಹಾಗೂ The Karnataka Educational Institutions(Classification and Registration) Rules 1997ರಲ್ಲಿ ಸರ್ಕಾರದ ಅಧಿಸೂಚನೆ ಪತ್ರ ಸಂಖ್ಯೆ:ED 709 PGC 2017 ದಿನಾಂಕ:07-03-2018ರ ಅಧಿಸೂಚನೆಯಂತೆ ಹೊಸ ಶಾಲಾ ನೊಂದಣಿ ಮತ್ತು ಉನ್ನತೀಕರಿಸಿದ ತರಗತಿಗಳನ್ನು ಪ್ರಾರಂಭಿಸಲು ಅನುಮತಿ ಕೋರಿ ಶೈಕ್ಷಣಿಕ ವರ್ಷದ ಹಿಂದಿನ ಸಾಲಿನ ನವೆಂಬರ್ 30 ಅಥವಾ ಅದಕ್ಕೂ ಮೊದಲು ಇಲಾಖಾ ವೆಬ್ ಸೈಟ್ ನಲ್ಲಿ ಹೊಸ ಶಾಲಾ ನೋಂದಣಿ ಕುರಿತು ಅರ್ಜಿ ಸಲ್ಲಿಸಿ ನೊಂದಣಿ ಪಡೆಯಬೇಕಾಗಿರುತ್ತದೆ. ಅದರಂತೆ ಉಲ್ಲೇಖ-13 ರನ್ವಯ 2024-25 ಅದರಂತೆ 2024-25ನೇ ಸಾಲಿಗೆ ಖಾಸಗಿ ಅನುದಾನರಹಿತ ಪೂರ್ವ ಪ್ರಾಥಮಿಕ / ಪ್ರಾಥಮಿಕ/ ಪ್ರೌಢ ಶಾಲೆ ನೊಂದಣಿಗೆ ಹಾಗೂ ಉನ್ನತೀಕರಿಸಿದ ತರಗತಿಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆಗಳು ಆನ್‌ಲೈನ್ ಮುಖಾಂತರ ಇಲಾಖಾ ವೆಬ್‌ಸೈಟ್‌ನಲ್ಲಿ https://schooleducation.karnataka.gov.in/ ಅರ್ಜಿಗಳನ್ನು ಸಲ್ಲಿಸಲು ಹಾಗೂ ಉಲ್ಲೇಖಿತ (14) ರಲ್ಲಿ ಆಡಳಿತ ಮಂಡಳಿಗೆ ದಿನಾಂಕ:15-03-2024 ರವರೆಗೆ ಅರ್ಜಿಗಳನ್ನು ಸಲ್ಲಿಸಲು ಅವಧಿಯನ್ನು ವಿಸ್ತರಿಸಿ ಕಾಲಾವಕಾಶ ಕಲ್ಪಿಸಲಾಗಿತ್ತು.

ಮುಂದುವರೆದು, 2024-25ನೇ ಸಾಲಿನ ಹೊಸ ಶಾಲಾ ನೊಂದಣಿಗೆ ಅವಧಿಯನ್ನು ವಿಸ್ತರಿಸುವಂತೆ ಸಲ್ಲಿಕೆಯಾದ ಮನವಿಗಳು ಹಾಗೂ ಉಲ್ಲೇಖಿತ (15)ರಲ್ಲಿ ಸರ್ಕಾರದಿಂದ ಏಕಕಡತದಲ್ಲಿ ಅನುಮೋದನೆಯಂತೆ 2024-25ನೇ ಸಾಲಿಗೆ ಹೊಸದಾಗಿ ಖಾಸಗಿ ಅನುದಾನರಹಿತ ಪೂರ್ವ ಪ್ರಾಥಮಿಕ / ಪ್ರಾಥಮಿಕ/ ಪ್ರೌಢ ಶಾಲೆ ನೊಂದಣಿಗೆ ಹಾಗೂ ಉನ್ನತೀಕರಿಸಿದ ತರಗತಿಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆಗಳು ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸಲು ದಿನಾಂಕ:-04-09-2024 ರಿಂದ ದಿನಾಂಕ:21-09-2024ರವರೆಗೆ 15 ದಿನಗಳ ಕಾಲ ಅಂತಿಮವಾಗಿ ಅವಕಾಶ ನೀಡಲಾಗಿದೆ.

ಈಗಾಗಲೇ 2024-25ನೇ ಸಾಲಿಗೆ ಹೊಸ ಶಾಲಾ ನೊಂದಣಿ ಮತ್ತು ಉನ್ನತೀಕರಿಸಿದ ತರಗತಿಗಳನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸಿ ತಿರಸ್ಕೃತಗೊಂಡ ಆಡಳಿತ ಮಂಡಳಿಗಳಿಗೆ ಹಾಗೂ ಹೊಸದಾಗಿ ಅರ್ಜಿಗಳನ್ನು ಸಲ್ಲಿಸುವ ಆಡಳಿತ ಮಂಡಳಿಗಳಿಗೂ ಈ ಅವಕಾಶ ಅನ್ವಯವಾಗುತ್ತದೆ.

ಉಚಿತ ಮತ್ತು ಕಡ್ಡಾಯ ಮಕ್ಕಳ ಹಕ್ಕು ಶಿಕ್ಷಣ ಕಾಯ್ದೆ-2009ರ ಷೆಡ್ಯೂಲ್ ನಂತೆ ಶಾಲೆಯು ಪ್ರತಿ ಶೈಕ್ಷಣಿಕ ವರ್ಷದಲ್ಲಿ 1 ರಿಂದ 5ನೇ ತರಗತಿಗಳಿಗೆ ಕನಿಷ್ಟ 800 ಗಂಟೆಗಳ ಬೋಧನಾ ಅವಧಿ ಹಾಗೂ 6 ರಿಂದ 8ನೇ ತರಗತಿಗಳಿಗೆ ಕನಿಷ್ಟ 1000 ಗಂಟೆಗಳ ಬೋಧನಾ ಅವಧಿ ಕಾರ್ಯನಿರ್ವಹಿಸಬೇಕಾಗಿರುತ್ತದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಅರ್ಜಿ ಸಲ್ಲಿಸಲು ಆಡಳಿತ ಮಂಡಳಿಗಳಿಗೆ ಅಂತಿಮ ಅವಕಾಶ ನೀಡಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಯಾವುದೇ ಕಾರಣಕ್ಕೂ ಕಾಲಾವಕಾಶವನ್ನು ಪುನ: ವಿಸ್ತರಿಸಲಾಗುವುದಿಲ್ಲ ಎಂಬ ಅಂಶವನ್ನು ಸ್ಪಷ್ಟವಾಗಿ ತಿಳಿಸಲಾಗಿದೆ.

ಈಗಾಗಲೇ 2024-25ನೇ ಶೈಕ್ಷಣಿಕ ಸಾಲು ಪ್ರಾರಂಭವಾಗಿ ಎರಡು ತಿಂಗಳು ಕಳೆದಿರುವುದರಿಂದ ಹೊಸ ಶಾಲಾ ನೊಂದಣಿಗೆ ಸಲ್ಲಿಕೆಯಾಗುವ ಅರ್ಜಿಗಳ ಪರಿಶೀಲನೆ ನಿಗದಿಪಡಿಸಿದ ಕಾಲಾವಕಾಶವನ್ನು ಕಡಿತಗೊಳಿಸಲಾಗಿದ್ದು, ವೇಳಾಪಟ್ಟಿಯಲ್ಲಿ ನೀಡಿದಂತೆ ನಿಗದಿತ ಕಾಲಾವಧಿಯನ್ನು ಅರ್ಜಿಗಳನ್ನು ಇತ್ಯರ್ಥಪಡಿಸಲು ಅಗತ್ಯ ಕ್ರಮ ವಹಿಸುವುದು. ಈ ಹಿನ್ನೆಲೆಯಲ್ಲಿ ಉಪನಿರ್ದೇಶಕರ ಕಚೇರಿಯ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಗಳು ತಮ್ಮ ಲಾಗಿನ್‌ನಲ್ಲಿ ಸಲ್ಲಿಕೆಯಾಗುವ ಅರ್ಜಿಗಳನ್ನು ವಿಳಂಬಕ್ಕೆ ಅವಕಾಶ ನೀಡದೇ ಆಯಾ ದಿನವೇ ನಿಯಮಾನುಸಾರ ಪರಿಶೀಲಿಸಿ ಮುಂದಿನ ಹಂತಕ್ಕೆ ಸಲ್ಲಿಸುವುದು. ಉಪನಿರ್ದೇಶಕರು ತಮ್ಮ ಲಾಗಿನ್‌ಗೆ ಸಲ್ಲಿಕೆಯಾದ ಅರ್ಜಿಗಳನ್ನು ಸಹ ಆಯಾ ದಿನವೇ ಪರಿಶೀಲಿಸಿ ಅಗತ್ಯವಿದ್ದಲ್ಲಿ ರೋಲ್ ಬ್ಯಾಕ್ ಮಾಡಲು, ಅರ್ಜಿಯನ್ನು ಅನುಮೋದನೆ ಅಥವಾ ತಿರಸ್ಕರಿಸಿ ಇತ್ಯರ್ಥಪಡಿಸಿದಲ್ಲಿ ಆಯಾ ದಿನವೇ ಡಿ.ಎಸ್.ಸಿ. ಮೂಲಕ ಅನುಮೋದಿಸಿ ಆದೇಶವನ್ನು ನೀಡಲು ಕ್ರಮವಹಿಸಲು ಸೂಚಿಸಿದೆ. ಯಾವುದೇ ಕಾರಣಕ್ಕೂ ಅರ್ಜಿಯನ್ನು ಪರಿಶೀಲಿಸಲು ವಿಳಂಬ ಮಾಡಿದಲ್ಲಿ ಅಥವಾ Overdue ಆಗಲು ಅವಕಾಶ ನೀಡಿದಲ್ಲಿ ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ) ಇವರನ್ನೇ ಹೊಣೆಗಾರರನ್ನಾಗಿಸಲಾಗುವುದು.

ಪ್ರಸ್ತುತ 2024-25ನೇ ಸಾಲಿಗೆ ನೊಂದಣಿ ಕೋರಿ ಅರ್ಜಿ ಸಲ್ಲಿಸಲು ನೀಡಿದ ಕಾಲಾವಕಾಶದಲ್ಲಿ ಯಾವುದೇ ಶಾಲಾ ಆಡಳಿತ ಮಂಡಳಿಯ ಅರ್ಜಿಯು ತಿರಸ್ಕೃತಗೊಂಡಲ್ಲಿ ಅಥವಾ ದಾಖಲೆಗಳ ಕೊರತೆಯಿಂದ ಅರ್ಜಿ ಸಲ್ಲಿಸಲು ಅವಕಾಶವಾಗದಿದ್ದಲ್ಲಿ ಅಂತಹ ಆಡಳಿತ ಮಂಡಳಿಗಳು ದಿನಾಂಕ:-25-09-2024 ರಿಂದ 2025-26ನೇ ಸಾಲಿಗೆ ಹೊಸಶಾಲಾ ನೊಂದಣಿಗೆ ಅರ್ಜಿ ಆಹ್ವಾನಿಸಿ ಬಿಡುಗಡೆ ಮಾಡುವ ಆನ್ ಲೈನ್ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಉಳಿದಂತೆ ಉಲ್ಲೇಖ(1) ರಿಂದ 14ರವರೆಗಿನ ಸುತ್ತೋಲೆಗಳಲ್ಲಿನ ಎಲ್ಲಾ ಅಂಶಗಳು ಯಥಾವತ್ತಾಗಿ ಮುಂದುವರೆಯುತ್ತವೆ.

## 2024-25ನೇ ಸಾಲಿಗೆ ಹೊಸ ಶಾಲಾ ನೊಂದಣಿಗೆ ಅರ್ಜಿ ಸಲ್ಲಿಸಲು ಕಾಲಮಿತಿ ವಿಸ್ತರಿಸಿ ನಿಗದಿಪಡಿಸಿರುವ ವೇಳಾಪಟ್ಟಿ

| ಕ್ರ.ಸಂ | ವಿಷಯ | ದಿನಾಂಕ |
|---|---|---|
| 01 | 2024-25ನೇ ಸಾಲಿಗೆ ಹೊಸ ಶಾಲೆಗಳ ನೊಂದಣಿಗಾಗಿ ಹೊಸ ತಂತ್ರಾಂಶವನ್ನು ಬಿಡುಗಡೆ ಮಾಡುವುದು. | **04-09-2024** |
| 02 | ಅರ್ಹ ನೋಂದಾಯಿತ ಸಂಸ್ಥೆಗಳು ಹೊಸ ಶಾಲೆಗಳ ನೊಂದಣಿಗಾಗಿ/ ಉನ್ನತೀಕರಿಸುವ ಶಾಲೆಗಳ ನೊಂದಣಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕ. | **04-09-2024ರಿಂದ 21-09-2024** |
| 03 | Cash mode ಮಾಡಿಕೊಂಡಲ್ಲಿ ನೊಂದಣಿ ಶುಲ್ಕ ಪಾವತಿ ಚಲನ್ ಜನರೇಟ್ ಮಾಡಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ | **19-09-2024** |
| 04 | Online mode/UPI ಆಯ್ಕೆ ಮಾಡಿಕೊಂಡಲ್ಲಿ ನೊಂದಣಿ ಶುಲ್ಕ ಪಾವತಿ ಚಲನ್ ಜನರೇಟ್ ಮಾಡಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ | **20-09-2024** |
| 05 | **ವಿಷಯ ನಿರ್ವಾಹಕರು (DCW)**<br>ಲಾಗಿನ್‌ಗೆ ಸ್ವೀಕೃತಿಯಾಗಿರುವ ಅರ್ಜಿಗಳನ್ನು ಪರಿಶೀಲಿಸಿ ವಾಸ್ತವಾಂಶದ ಮಾಹಿತಿಗಳನ್ನು ಅಪ್‌ಲೋಡ್ ಮಾಡಲು ನಿಗದಿಪಡಿಸಿರುವ ದಿನಾಂಕ<br>**ಲಾಗಿನ್ ನಲ್ಲಿ ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಗರಿಷ್ಟ 03 ಕರ್ತವ್ಯದ ದಿನಗಳು** | **05-09-2024 ರಿಂದ 25-09-2024** |
| 06 | **ಪತ್ರಾಂಕಿತ ಸಹಾಯಕರು (DOF)**<br>ತಮ್ಮ ಲಾಗಿನ್‌ನಲ್ಲಿ ಸ್ವೀಕೃತಿಯಾಗಿರುವ ಅರ್ಜಿಗಳನ್ನು ಪರಿಶೀಲಿಸಿ ವಾಸ್ತವಾಂಶದ ವರದಿಯೊಂದಿಗೆ ಉಪನಿರ್ದೇಶಕರಿಗೆ ಆನ್‌ಲೈನ್ ತಂತ್ರಾಂಶದಲ್ಲಿ ಸಲ್ಲಿಸಲು ನಿಗದಿಪಡಿಸಿರುವ ಅಂತಿಮ ದಿನಾಂಕ.<br>**ಲಾಗಿನ್ ನಲ್ಲಿ ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಗರಿಷ್ಟ 03 ಕರ್ತವ್ಯದ ದಿನಗಳು** | **06-09-2024 ರಿಂದ 30-09-2024** |
| | ಯಾವುದೇ ಶಾಲೆ Random Selection ನಲ್ಲಿ ಸ್ಥಳ ಭೇಟಿಗೆ ಆಯ್ಕೆಯಾದಲ್ಲಿ ಅಂತಹ ಶಾಲೆಗೆ ಮಾತ್ರ ತ್ರಿಸದಸ್ಯ ಸಮಿತಿಯಿಂದ ವರದಿ ಪಡೆದು ಅಪ್‌ಲೋಡ್ ಮಾಡಿ ವಾಸ್ತವಾಂಶದ ವರದಿಯೊಂದಿಗೆ ಉಪನಿರ್ದೇಶಕರಿಗೆ ಆನ್‌ಲೈನ್ ತಂತ್ರಾಂಶದಲ್ಲಿ ಸಲ್ಲಿಸಲು ನಿಗದಿಪಡಿಸಿರುವ ಅಂತಿಮ ದಿನಾಂಕ<br>**ಲಾಗಿನ್ ನಲ್ಲಿ ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಗರಿಷ್ಟ 03 ಕರ್ತವ್ಯದ ದಿನಗಳು** | **09-09-2024 ರಿಂದ 04-10-2024** |
| 07 | **ಉಪನಿರ್ದೇಶಕರು (DDPI) ಅರ್ಜಿಗಳ Roll Back ಮಾಡಲು** - ತಮ್ಮ ಲಾಗಿನ್‌ನಲ್ಲಿ ಸ್ವೀಕೃತಿಯಾಗಿರುವ ಅರ್ಜಿಗಳನ್ನು ಪರಿಶೀಲಿಸಿ ಆಕ್ಷೇಪಣೆಗಳಿದ್ದಲ್ಲಿ ನಿಖರವಾಗಿ ದಾಖಲಿಸಿ ಸಂಬಂಧಿಸಿದ ಮಾಹಿತಿ/ದಾಖಲೆಗಳನ್ನು ಸರಿಪಡಿಸಿ ಪುನರ್ ಸಲ್ಲಿಸಲು ಸೂಚಿಸಿ ಆಡಳಿತ ಮಂಡಳಿಗೆ ರೋಲ್ ಬ್ಯಾಕ್ ಮಾಡಲು ಅಂತಿಮ ದಿನಾಂಕ<br>**(ಲಾಗಿನ್‌ನಲ್ಲಿ ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಗರಿಷ್ಟ 03 ಕರ್ತವ್ಯದ ದಿನಗಳು) ಎರಡನೇ ಬಾರಿಗೆ ಅಥವಾ ಅವಧಿ ಮುಗಿದ ನಂತರದಲ್ಲಿ Roll Backಗೆ ಅವಕಾಶವಿರುವುದಿಲ್ಲ).** | **09-09-2024 ರಿಂದ 04-10-2024** |

| | | |
|---|---|---|
| 07 ಎ | **ಉಪನಿರ್ದೇಶಕರು (DDPI) Roll Back ಮಾಡದ ಅರ್ಜಿಗಳನ್ನು ವಿಲೇ ಮಾಡಲು** - ತಮ್ಮ ಲಾಗಿನ್‌ನಲ್ಲಿ ಸ್ವೀಕೃತಿಯಾಗಿರುವ ಅರ್ಜಿಗಳನ್ನು ಪರಿಶೀಲಿಸಿ ಯಾವುದೇ ಆಕ್ಷೇಪಣೆಗಳಿಲ್ಲದಿದ್ದಲ್ಲಿ ಅಂದರೆ Roll Back ಅವಶ್ಯಕತೆ ಇಲ್ಲದ ಅರ್ಜಿಗಳನ್ನು ಪ್ರಚಲಿತ ನಿಯಮಗಳಂತೆ ಇತ್ಯರ್ಥಪಡಿಸಿ ಮಂಜೂರಾತಿ ಅಥವಾ ಸಕಾರಣ ಸಹಿತ ತಿರಸ್ಕೃತ ಆದೇಶ ಹೊರಡಿಸಲು ನಿಗದಿಪಡಿಸಿರುವ ಕಾಲಾವಧಿ<br>**ಲಾಗಿನ್ ನಲ್ಲಿ ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಗರಿಷ್ಠ 04 ಕರ್ತವ್ಯದ ದಿನಗಳು** | **09-09-2024 ರಿಂದ 05-10-2024** |
| 08 | **Roll Back ಪಡೆದ ಆಡಳಿತ ಮಂಡಳಿಗಳು ಮರು ಸಲ್ಲಿಸಲು** - ಉಪನಿರ್ದೇಶಕರಿಂದ Roll Back ಆಗಿ ಬಂದ ಅರ್ಜಿಯಲ್ಲಿನ ದಾಖಲೆಗಳನ್ನು ಸರಿಪಡಿಸಿ ಹಿಂತಿರುಗಿಸಲು ಅಂತಿಮ ದಿನಾಂಕ.<br>**ಲಾಗಿನ್ ನಲ್ಲಿ ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಗರಿಷ್ಠ 03 ಕರ್ತವ್ಯದ ದಿನಗಳು** | **10-09-2024 ರಿಂದ 08-10-2024** |
| 08ಎ | **ಉಪನಿರ್ದೇಶಕರು (DDPI) Roll back ನಂತರ ಮರುಸಲ್ಲಿಸಿದ ಅರ್ಜಿಗಳ ವಿಲೇ ಮಾಡಲು** -ಆಡಳಿತ ಮಂಡಳಿಯು Roll back ನಂತರ ಮರುಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸಿ ಪ್ರಚಲಿತ ನಿಯಮಗಳಂತೆ ಇತ್ಯರ್ಥಪಡಿಸಿ ಮಂಜೂರಾತಿ ಅಥವಾ ಸಕಾರಣ ಸಹಿತ ತಿರಸ್ಕೃತ ಆದೇಶ ಹೊರಡಿಸಲು ನಿಗದಿಪಡಿಸಿರುವ ಕಾಲಾವಧಿ (ಅಂತಿಮ ದಿನಾಂಕದ ನಂತರ ಯಾವುದೇ ಅರ್ಜಿಗಳು ಬಾಕಿ ಇರುವಂತಿಲ್ಲ)<br>**ಲಾಗಿನ್‌ನಲ್ಲಿ ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಗರಿಷ್ಠ 03 ಕರ್ತವ್ಯದ ದಿನಗಳು** | **11-09-2024 ರಿಂದ 14-10-2024** |
| 09 | **ಉಪನಿರ್ದೇಶಕರು (DDPI)** ಡೈಸ್‌ಕೋಡ್ ಪಡೆಯಲು ಮಂಜೂರಾತಿ/ ನೋಂದಣಿ ನೀಡಿದ ಶಾಲೆಗಳಿಗೆ ಉಪನಿರ್ದೇಶಕರೇ ನೇರವಾಗಿ SATS ಮುಖಾಂತರ ಸಿದ್ಧಪಡಿಸಿರುವ ತಂತ್ರಾಂಶದಲ್ಲಿ ಅಗತ್ಯ ಮಾಹಿತಿಗಳನ್ನು ಅಪ್‌ಲೋಡ್ ಮಾಡಿ MOEಗೆ ಕಳುಹಿಸಿ ತದನಂತರ ಎಂ.ಹೆಚ್ ಆರ್.ಡಿ. ಕಛೇರಿಗೆ ಕಳುಹಿಸುವುದು. ಮುಂದುವರೆದು ಸಂಬಂಧಿಸಿದ ಶಾಲೆಗೆ ಡೈಸ್ ಕೋಡ್ ಪಡೆದು ನೋಂದಣಿ ಪತ್ರದಲ್ಲಿ ದಾಖಲಿಸಿ ಡಿಜಿಟಲ್ ಸಹಿಯೊಂದಿಗೆ ನೋಂದಣಿ ಆದೇಶ ನೀಡಲು ನಿಗದಿಪಡಿಸಿರುವ ದಿನಾಂಕ: | **28-10-2024** |

**ಮೇಲ್ಮನವಿ ಪ್ರಾಧಿಕಾರ (APPEALLATE AUTHORITY):-** ಉಲ್ಲೇಖ(12)ರಂತೆ ನಿಯಮ 130 ರಲ್ಲಿ ತಿರಸ್ಕೃತವಾಗಿರುವ ಅರ್ಜಿಗಳ ಸಂಬಂಧ ಆಡಳಿತ ಮಂಡಳಿಗಳು ಅರ್ಜಿ ತಿರಸ್ಕೃತವಾದ 30 ದಿನಗಳ ಒಳಗೆ ಆನ್‌ಲೈನ್ ನಲ್ಲಿ ಮಾತ್ರ ಮೇಲ್ಮನವಿ ಸಲ್ಲಿಸಲು ಹೊಸ ಶಾಲಾ ನೊಂದಣಿ ಮೇಲ್ಮನವಿ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಅದರಂತೆ ಸಂಬಂಧಿಸಿದ ಪ್ರಾಧಿಕಾರವಾದ ಆಯಾ ವಿಭಾಗದ ಆಯುಕ್ತರುಗಳಿಗೆ ಆನ್‌ಲೈನ್‌ನಲ್ಲಿ ಮೇಲ್ಮನವಿ ಸಲ್ಲಿಸಿ ಅಹವಾಲು ಇತ್ಯರ್ಥ ಪಡಿಸಿಕೊಳ್ಳಬಹುದಾಗಿದೆ. ತದನಂತರ ಮೇಲ್ಮನವಿ ಪ್ರಾಧಿಕಾರಿಗಳು ಸಲ್ಲಿಕೆಯಾದ ಮೇಲ್ಮನವಿ ಅರ್ಜಿಗಳನ್ನು ಸ್ವೀಕರಿಸಿದ 30 ದಿನಗಳೊಳಗೆ ಪರಿಶೀಲಿಸಿ ಆದೇಶ ನೀಡುವುದರೊಂದಿಗೆ ಪುರಸ್ಕೃತ ಅಥವಾ ತಿರಸ್ಕೃತಗೊಂಡ ಬಗ್ಗೆ ಆನ್‌ಲೈನ್ ತಂತ್ರಾಂಶದಲ್ಲಿಯೇ ಆದೇಶ ಅಪ್‌ಲೋಡ್ ಮಾಡಿ ಅನುಮೋದಿಸಿ ಇತ್ಯರ್ಥಪಡಿಸಿ ಸಂಬಂಧಿಸಿದ ಉಪನಿರ್ದೇಶಕರಿಗೆ ಸಲ್ಲಿಸುವುದು. ತದನಂತರ ಉಪನಿರ್ದೇಶಕರು ಆನ್ ಲೈನ್ ನಲ್ಲಿಯೇ ಕ್ರಮವಹಿಸುವುದು. **ಯಾವುದೇ ಕಾರಣಕ್ಕೂ ಮೇಲ್ಮನವಿ ಸಂಬಂಧ ಭೌತಿಕವಾಗಿ ಪ್ರಸ್ತಾವನೆಯನ್ನು ಪರಿಗಣಿಸುವುದಿಲ್ಲ**.

ಈ ಮೇಲ್ಕಂಡಂತೆ ಹೊಸ ಖಾಸಗಿ ಅನುದಾನರಹಿತ ಶಾಲೆಗಳಿಗೆ ನೊಂದಣಿ ನೀಡುವುದರ ಜೊತೆಯಲ್ಲಿಯೇ ಡೈಸ್ ಕೋಡ್ ಅನ್ನು ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದು ಸಂಬಂಧಿಸಿದ ಶಾಲಾ ಆಡಳಿತ ಮಂಡಳಿಗೆ ನೀಡುವ ಜವಾಬ್ದಾರಿ ನೊಂದಣಿ ಪ್ರಾಧಿಕಾರಿಗಳಾದ ಉಪನಿರ್ದೇಶಕರು (ಆಡಳಿತ) ರವರು ಅನುಷ್ಠಾನಾಧಿಕಾರಿಗಳಾಗಿರುವುದರಿಂದ ನಿಯಮಾನುಸಾರ ಕ್ರಮವಹಿಸತಕ್ಕದ್ದು.

**ಶಾಲಾ ಆಡಳಿತ ಮಂಡಳಿಗಳಿಗೆ ವಿಶೇಷ ಸೂಚನೆ:-**

- ವಿಸ್ತರಿಸಿದ ಕಾಲಾವಕಾಶದಲ್ಲಿ ಹೊಸ ಶಾಲಾ ನೊಂದಣಿ ಅರ್ಜಿ ಸಲ್ಲಿಸಲು ಬಯಸುವ ಶಾಲಾ ಆಡಳಿತಮಂಡಳಿಗಳು ಈ ಸುತ್ತೋಲೆಯೊಂದಿಗೆ ನೀಡಿರುವ ವೇಳಾಪಟ್ಟಿಯನ್ನು ಮತ್ತು ಉಲ್ಲೇಖಿಸಿರುವ ಸುತ್ತೋಲೆಗಳಲ್ಲಿನ ಅಂಶಗಳನ್ನು ಸೂಕ್ತವಾಗಿ ಗಮನಿಸಿ ನಿಗದಿತ ಅವಧಿಯಲ್ಲಿ ಅರ್ಜಿ ಸಲ್ಲಿಸಲು ಕ್ರಮವಹಿಸುವುದು.
- ಯಾವುದೇ ಆಡಳಿತ ಮಂಡಳಿಯು ಹೊಸ ಶಾಲೆ ಪ್ರಾರಂಭ ಅಥವಾ ಉನ್ನತೀಕರಿಸಿದ ತರಗತಿಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ ಹೊಸ ಶಾಲೆ ಅಥವಾ ಉನ್ನತೀಕರಿಸಿದ ತರಗತಿಗಳಿಗೆ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುವಂತಿಲ್ಲ. ಹಾಗೇನಾದರೂ ಅನುಮೋದನೆ/ನೋಂದಣಿ ಪಡೆಯದೇ ವಿದ್ಯಾರ್ಥಿಗಳನ್ನು ದಾಖಲಿಸಿಕೊಂಡಲ್ಲಿ ಅಂತಹ ಶಾಲೆಯನ್ನು "ಅನಧಿಕೃತ ಶಾಲೆ" ಎಂದು ಪರಿಗಣಿಸಿ ನಿಯಮಾನುಸಾರ ಕ್ರಮವಹಿಸಲಾಗುವುದು.

[illegible]
**ಆಯುಕ್ತರು**
ಶಾಲಾ ಶಿಕ್ಷಣ ಇಲಾಖೆ
ಬೆಂಗಳೂರು

**ಇವರಿಗೆ:**
01.ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
02.ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು ಮಾಹಿತಿಗಾಗಿ.**

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ರಾಜ್ಯದ ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
3. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ ಗಳಿಗೆ ಕಳುಹಿಸುತ್ತಾ ಸದರಿ ವಿಷಯವನ್ನು ಮಾನ್ಯ ಸಚಿವರ ಅವಗಾಹನೆಗೆ ತರುವಂತೆ ಕೋರಿದೆ.
4. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರ್ಗಿ ವಿಭಾಗ.
5. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
6. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದಕ್ಕಾಗಿ.
7. ಹಿರಿಯ ಸಹಾಯಕ ನಿರ್ದೇಶಕರು, ಎಸ್.ಎ.ಟಿ.ಎಸ್., ವಿಭಾಗ, ಇವರು ತಂತ್ರಾಂಶವನ್ನು ರೂಪಿಸುವುದು ಹಾಗೂ ರೂಪಿಸಿದ ಮಾರ್ಪಾಡುಗಳನ್ನು ತಂತ್ರಾಂಶದಲ್ಲಿ ಸಮರ್ಪಕವಾಗಿ ಅಳವಡಿಸಿ ತಂತ್ರಾಂಶದಲ್ಲಿ ಕಾರ್ಯನಿರ್ವಹಿಸುವಂತೆ programming ಮಾಡಿ ಕ್ರಮ ವಹಿಸುವುದು.
8. ಕಚೇರಿ ಪ್ರತಿ.